## ನಿಮ್ಮೊಡನೆ

# ಬದುಕು ತಲ್ಲಣಗೊಂಡ ಹೊತ್ತಿನಲ್ಲೂ ಮನಸ್ಸಿನ ಕಿಲುಬಿಗೆ ದೊರೆಯದ ಮದ್ದು

ಲಂಕೇಶರ 'ಮುಟ್ಟಿಸಿಕೊಂಡವನು' ಕಥೆಯಲ್ಲಿ ನೇತ್ರಬಾಧೆಗೆ ಒಳಗಾದ ವ್ಯಕ್ತಿಯೊಬ್ಬ, ತನಗೆ ಚಿಕಿತ್ಸೆ ನೀಡಿದ್ದು ದಲಿತ ಸಮುದಾದ ವೈದ್ಯನೆಂದು ತಿಳಿದು ಮತ್ತಷ್ಟು ಅನಾರೋಗ್ಯಕ್ಕೆ ಒಳಗಾಗುತ್ತಾನೆ. ಅಂಥ ಕಥಾನಾಯಕರ ಸಂಖ್ಯೆ ಆಧುನಿಕತೆಯ ವರ್ತಮಾನದಲ್ಲಿ ಹೆಚ್ಚುತ್ತಿರುವುದು, ಸಾಮಾಜಿಕ ಆರೋಗ್ಯದ ಆತಂಕ ಮೂಡಿಸುವಂತಹದ್ದು.



ಈಶ್ವರ್

ಬದುಕಿನ ಮುಂದೆ ದೊಡ್ಡದೊಂದು ಪ್ರಶ್ನಾರ್ಥಕ ಚಿಹ್ನೆ ಎದುರಾಗಿರುವ ಸಂದರ್ಭದಲ್ಲೂ ನಮ್ಮೊಳಗಿನ ಸ್ವಾರ್ಥ ಹಾಗೂ ಮೇಲುಕೀಳಿನ ಭಾವನೆಗಳು ಜೀವಂತವಾಗಿರುತ್ತವೆ ಎನ್ನುವುದಕ್ಕೆ ವೈದ್ಯಕೀಯ ವರ್ಗದ ಬಗ್ಗೆ ಸಮಾಜದ ಕೆಲವು ವರ್ಗ ತೋರುತ್ತಿರುವ ಮನೋಭಾವ ಉದಾಹರಣೆಯಂತಿದೆ. ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಯನ್ನು ಮನೆ ತೆರವು ಮಾಡುವಂತೆ ರಾಜ್ಯದ ಕೆಲವು ಭಾಗಗಳಲ್ಲಿ ಮನೆಗಳ ಮಾಲೀಕರು ಒತ್ತಾಯಿಸುತ್ತಿದ್ದಾರೆ. ದೆಹಲಿಯಲ್ಲೂ ಇಂಥ ಘಟನೆಗಳು ವರದಿಯಾಗಿವೆ. ಕೊರೊನಾ ಸೋಂಕು ವೈದ್ಯಕೀಯ ಸಿಬ್ಬಂದಿಗೆ ತಗುಲುವ ಸಾಧ್ಯತೆ ಹೆಚ್ಚಾಗಿದೆ ಎನ್ನುವ ಆತಂಕವೇ ಅತಿರೇಕದ ವರ್ತನೆಗಳಿಗೆ ಕಾರಣ.

ಸಾಂಕ್ರಾಮಿಕ ರೋಗದ ಆತಂಕದಲ್ಲಿ ಎಲ್ಲ ವರ್ಗದ ಜನರೂ ಸ್ವಯಂ ನಿರ್ಬಂಧ ಹೇರಿಕೊಂಡು ಮನೆಯಲ್ಲಿ ಕುಳಿತಿರುವಾಗ ವೈದ್ಯಕೀಯ ಕ್ಷೇತ್ರ ಮಾತ್ರ ಆಸ್ಪತ್ರೆಗಳಲ್ಲಿ ಅವಿಶ್ರಾಂತವಾಗಿ ದುಡಿಯುತ್ತಿದೆ. ಅನೇಕ ಕಡೆಗಳಲ್ಲಿ ಸೂಕ್ತ ಮೂಲಭೂತ ಸವಲತ್ತುಗಳು ಇಲ್ಲದೆ ಹೋದರೂ ವೈದ್ಯರೂ ವೈದ್ಯಕೀಯ ಸಿಬ್ಬಂದಿಯೂ ಕರ್ತವ್ಯದಲ್ಲಿ ನಿರತವಾಗಿದೆ. ರೋಗಿಗಳಿಂದ ಸೋಂಕು ತಗುಲುವ ಸಾಧ್ಯತೆಯನ್ನು ನಿರ್ಲಕ್ಷಿಸಿ, ಆತಂಕವನ್ನು ಅದುಮಿಟ್ಟುಕೊಂಡೇ ವೈದ್ಯಕೀಯ ಕ್ಷೇತ್ರ ಸೇವಾಕಾರ್ಯದಲ್ಲಿ ತೊಡಗಿಕೊಂಡಿದೆ. ವಿಶ್ವದ ಕೆಲವು ಭಾಗಗಳಲ್ಲಿ ಕೊರೊನಾಪೀಡಿತ ರೋಗಿಗಳ ಶುಶ್ರೂಷೆಯಲ್ಲಿ ತೊಡಗಿದ್ದ ವೈದ್ಯರುಗಳೇ ಆ ಸೋಂಕಿಗೆ ತುತ್ತಾಗಿ ಸಾವನ್ನಪ್ಪಿದ್ದಾರೆ. ಸಾವುನೋವಿನ ದುರದೃಷ್ಟಕರ ಘಟನೆಗಳ ನಂತರವೂ ವೈದ್ಯವೃಂದ ಮಾನಸಿಕ ಸ್ಥೈರ್ಯ ಕಳೆದುಕೊಳ್ಳದೆ ರೋಗಿಗಳಿಗೆ ಚಿಕಿತ್ಸೆ ಮುಂದುವರೆಸಿರುವುದು, ವೈದ್ಯವೃತ್ತಿಯ ಜೊತೆಗೆ ತಳಕು ಹಾಕಿಕೊಂಡ ಉದಾತ್ತತೆ ಹಾಗೂ ನಿಸ್ವಾರ್ಥ ಮನೋಭಾವಕ್ಕೆ ತಕ್ಕುದಾಗಿದೆ. ವೈದ್ಯಕೀಯ ಸಿಬ್ಬಂದಿಯ ತ್ಯಾಗ ಮನೋಭಾವವೇನೂ ಕಡಿಮೆಯಾದುದಲ್ಲ. ವೈದ್ಯರಿಗಿಂತಲೂ ಹೆಚ್ಚು ಕಾಲ ರೋಗಿಗಳ ಉಪಚಾರದಲ್ಲಿ ತೊಡಗಬೇಕಾದ ಅನಿವಾರ್ಯತೆ ಅವರದು. ತಮ್ಮ ಜೀವಕ್ಕೆ ಅಪಾಯವಿರುವ ಸಂದರ್ಭದಲ್ಲೂ ಕಾರ್ಯ ನಿರ್ವಹಿಸುತ್ತಿರುವ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ಸಮಾಜದ ಮೆಚ್ಚುಗೆ–ಗೌರವಕ್ಕೆ ಅರ್ಹರು. ಅವರ ನಿಸ್ವಾರ್ಥ ಸೇವೆಗೆ ನಾವೆಲ್ಲರೂ ಕೃತಜ್ಞವಾಗಿರಬೇಕು. ಇದಕ್ಕೆ ಬದಲಾಗಿ ಅವರಿಗೆ ತೊಂದರೆ ಮಾಡುವ ರೀತಿಯಲ್ಲಿ ವರ್ತಿಸುವಷ್ಟು ಸಮಾಜ ಕೃತಘ್ನವಾಗಬಾರದು.

ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದವರನ್ನು ಮನೆ ಖಾಲಿ ಮಾಡುವಂತೆ ಒತ್ತಾಯಿಸುವ ಮಾಲೀಕರ ಮೇಲೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಹೇಳಿದೆ; ಈ ಮೂಲಕ ವೈದ್ಯಕೀಯ ಕ್ಷೇತ್ರದ ಆತ್ಮಸ್ಥೈರ್ಯವನ್ನು ಹೆಚ್ಚಿಸುವ ಕೆಲಸವನ್ನು ಮಾಡಿದೆ. ಇದರ ಜೊತೆಗೆ ವೈದ್ಯಕೀಯ ಸೇವೆಯಲ್ಲಿ ತೊಡಗಿಕೊಂಡವರ ಸುರಕ್ಷತೆಗೆ ಅಗತ್ಯವಾದ ಎಲ್ಲ ಸೌಕರ್ಯಗಳನ್ನೂ ಸರ್ಕಾರ ಒದಗಿಸಿಕೊಡಬೇಕಾಗಿದೆ.

ದಲಿತರಿಗೆ ಹಾಗೂ ಮುಸ್ಲಿಮರಿಗೆ ನಗರ ಪ್ರದೇಶಗಳಲ್ಲಿ ಮನೆಗಳು ಬಾಡಿಗೆಗೆ ದೊರೆಯುವುದು ಕಷ್ಟ. ಜಾತೀಯತೆ ನಗರಗಳಲ್ಲಿ ಹೊಸ ಸ್ವರೂಪ ಪಡೆದುಕೊಂಡಿರುವುದಕ್ಕೆ ಉದಾಹರಣೆಯಾಗಿ ಬಾಡಿಗೆ ಮನೆ ಮಾಲೀಕರ ವರ್ತನೆಯನ್ನು ಗಮನಿಸಬಹುದು. ಜಾತಿ, ಧರ್ಮ, ತಿನ್ನುವ ಆಹಾರ – ಇವೆಲ್ಲವೂ ಮನೆಯನ್ನು ಬಾಡಿಗೆಗೆ ನೀಡುವ ಸಂದರ್ಭದಲ್ಲಿ ಮಾನದಂಡವಾಗುವುದು ವಿಷಾದನೀಯ. ಈ ವ್ಯಸನಕ್ಕೆ ಸೇರಿಕೊಂಡಿರುವ ಹೊಸತೊಂದು ಮೌಢ್ಯದ ರೂಪದಲ್ಲಿ ಮನೆ ಮಾಲೀಕರ ಕಣ್ಣು ವೈದ್ಯಕೀಯ ರಂಗದ ಮೇಲೆ ಬಿದ್ದಿದೆ. ಈ ಮಟ್ಟಿಗೆ ಮನಸ್ಸನ್ನು ಮಲಿನವಾಗಿಸಿಕೊಂಡವರು ತಾವೇ ರೋಗಪೀಡಿತರಾದರೆ ಎಲ್ಲಿಗೆ ಹೋಗುತ್ತಾರೆ? ಈ ನಿಟ್ಟಿನಲ್ಲಿ ಲಂಕೇಶರ 'ಮುಟ್ಟಿಸಿಕೊಂಡವನು' ಕಥೆಯನ್ನು ನೆನಪಿಸಿಕೊಳ್ಳಬೇಕು. ನೇತ್ರಬಾಧೆಗೆ ಒಳಗಾದ ವ್ಯಕ್ತಿಯೊಬ್ಬ, ತನಗೆ ಚಿಕಿತ್ಸೆ ನೀಡಿದ ವ್ಯಕ್ತಿ ಅಸ್ಪೃಶ್ಯನೆಂದು ತಿಳಿದು ಮಾನಸಿಕ ಸಂಕಟಕ್ಕೆ ಒಳಗಾಗಿ ಅನಾರೋಗ್ಯಕ್ಕೆ ತುತ್ತಾಗುವ ಕಥೆಯದು. ಆ ಕಥೆಯ ಕಥಾನಾಯಕರ ಸಂಖ್ಯೆ ಆಧುನಿಕತೆಯನ್ನು ಉಸಿರಾಡುತ್ತಿರುವ ವರ್ತಮಾನದಲ್ಲಿ ಹೆಚ್ಚುತ್ತಿರುವಂತಿದೆ.

ಕೊರೊನಾ ಸೋಂಕಿನ ಆತಂಕದ ಸಂದರ್ಭ ಮನುಷ್ಯರ ನಡುವೆ ಭೌತಿಕ ಅಂತರವನ್ನು ಸೃಷ್ಟಿಸಿದೆ. ಅದು ಈ ಹೊತ್ತಿನ ಅಗತ್ಯ ಕೂಡ. ಆದರೆ, ಈ ಅಂತರವನ್ನು ಅಸ್ಪೃಶ್ಯತೆಯ ಸಮರ್ಥನೆಗೆ ಬಳಸಿಕೊಳ್ಳುವ ಕುತರ್ಕದ ಪ್ರಯತ್ನಗಳೂ ನಡೆಯುತ್ತಿವೆ. ಇಂಥ ಸಮರ್ಥನೆಗಳು ಮಾನಸಿಕ ರೋಗದ ಸಂಕೇತಗಳಷ್ಟೇ. ನಮ್ಮಲ್ಲಿ ದೈಹಿಕ ರೋಗಕ್ಕಿಂತಲೂ ಮಾನಸಿಕ ಸಮಸ್ಯೆಗಳಿಗೆ ಮದ್ದಿನ ಅವಶ್ಯಕತೆಯೇ ಹೆಚ್ಚಾಗಿರುವಂತಿದೆ. ಭೌತಿಕ ಅಂತರದ ಮೂಲಕ ಕೆಲವು ದಿನಗಳಲ್ಲಿ ಕೊರೊನಾ ಸೋಂಕನ್ನು ತಹಬಂದಿಗೆ ತರಬಹುದು. ಆದರೆ, ಹೆಚ್ಚಾಗುತ್ತಿರುವ ಮನಸ್ಸುಗಳ ಅಂತರಕ್ಕೆ ಮದ್ದು ಸದ್ಯಕ್ಕಂತೂ ಕಾಣಿಸುತ್ತಿಲ್ಲ. ವಿಶ್ವವನ್ನೇ ಆತಂಕಕ್ಕೆ ದೂಡಿರುವ ಕೊರೊನಾದಂತಹ ವಿದ್ಯಮಾನಗಳು, ಮನಸ್ಸುಗಳ ಸಾಮೀಪ್ಯಕ್ಕೆ ಕಾರಣವಾಗಬೇಕಿತ್ತು. ಹಾಗಾಗುತ್ತಿಲ್ಲ ಎನ್ನುವುದು ಸಾಮಾಜಿಕ ಆರೋಗ್ಯದ ಬಗ್ಗೆ ಕಾಳಜಿಯುಳ್ಳವರೆಲ್ಲ ಆತಂಕಪಡಬೇಕಾದ ಸಂಗತಿ.

■ ರಘುನಾಥ ಚ.ಹ.